
ಜಡೆ. ಗಳದ ಮೇಲೆ ತೂಗಿದ ಹುಡುಗಿ. ಚೂರಿ-ರೆಕ್ಕೆ-ಕೊಕ್ಕು-ಪುಕ್ಕ. ಕಾಡಿನಲ್ಲಿ ಕತ್ತಲಿನಲ್ಲಿ ಒಡ್ಡಿದ ಪುಷ್ಟ ಮೊಲೆ. ಬೆಳ್ಳಿಯ ಮಣ್ಣಿನ ಬಣ್ಣದ ನಗ್ನ ಮೊಲೆ'' (127-128). ಹಾಗೆಯೇ, ''ಬಳೆ ಸದ್ದಾಯಿತು. ಮತ್ತೆ ಬೆಳಕಿಗೆ ಬಂದಳು. ನೆಮ್ಮದಿ. ದೇಹದಲ್ಲಿ ಆಸೆಯನ್ನು ಕೊರೆಯುತ್ತ ತಿರುಗಿದ ಒಂದು ನಿರೀಕ್ಷೆ. ತಟ್ಟೆಯನ್ನಿಡಲು ಬಗ್ಗಿದಾಗ ಜಾರಿದ ಸೆರಗು, ಮುಂದಕ್ಕೊಡ್ಡಿದ ಮೊಲೆ'' (128). ಇನ್ನೂ ಮುಂದುವರಿದು, "ಆಚಾರ್ಯರು ಎದ್ದು ನಿಂತರು. ಪದ್ಮಾವತಿಯನ್ನು ನೋಡಿದರು. ಸ್ನಾನ ಮಾಡಿ ಎಣ್ಣೆ ಹಾಕದ ಕೂದಲು. ಮಾಂಸದಿಂದ ಪುಷ್ಟವಾದ ತೊಡೆ, ನಿತಂಬ, ಎದೆ, ನೀಳ, ಎತ್ತರ ರೂಪ. ಕಣ್ಣುಗಳಲ್ಲಿ ಹೊಳಪು. ನಿರೀಕ್ಷೆ ಕಾದಿದೆ. ಪುಷ್ಪವತಿಯಾಗಿ ಐನೀರಿನ ಸ್ನಾನ ಮಾಡಿರಬೇಕು. ಉಸಿರಿಗೆ ಮೊಲೆಗಳು ಉಬ್ಬಿ ತಗ್ಗುತ್ತಿವೆ'' (129) ಎಂಬು ಸಾಲುಗಳನ್ನೂ ಗಮನಿಸಬಹುದು. ವೇದಾಂತ ಶಿರೋಮಣಿ ಪ್ರಾಣೇಶಾಚಾರ್ಯರು ತಾವು ಮೊದಲ ಬಾರಿ ಭೇಟಿಯಾದ ಹೆಣ್ಣೊಂದರ ಬಗ್ಗೆ ಹಾಗೆಲ್ಲ ಅಂದುಕೊಳ್ಳುವಷ್ಟು ಗಮನಿಸಿದ್ದರೆ? ಒಂದು ವೇಳೆ ಗಮನಿಸಿದ್ದಲ್ಲಿ ಪ್ರಾಣೇಶಾಚಾರ್ಯರ ಮನದಲ್ಲಿ ಅಂತಹ ಅಶ್ಲೀಲ ಆಲೋಚನೆಗಳು ಕಾದಂಬರಿಯುದ್ದಕ್ಕೂ ಸಂಧಿಸುವ ಹೆಣ್ಣುಗಳ ಬಗ್ಗೆ ಮೂಡಿರುವುದನ್ನು ಕಂಡು ದಿಗ್ಭ್ರಾಂತರಾಗಬೇಕಷ್ಟೆ. ಕಾದಂಬರಿಯ ಪಾತ್ರವೊಂದು ಅದರ ವ್ಯಕ್ತಿತ್ವಕ್ಕೆ ತದ್ವಿರುದ್ಧವಾದ ಭಾಷೆಯಲ್ಲಿ ನುಡಿದಾಗ, ಯೋಚಿಸಿದಾಗ ಅದು ಪಾತ್ರದ ಭಾಷೆಯಾಗುತ್ತದೆಯೇ ಅಥವಾ ಲೇಖಕರ ಭಾಷೆಯಾಗುತ್ತದೆಯೇ? ಅದಿರಲಿ.

ತತ್ವಶಾಸ್ತ್ರಜ್ಞರಾದ ಸ್ಲಾವೊ ಜಿಜೆಕ್, 2010ರಲ್ಲಿ ಪ್ರಕಟವಾದ ತಮ್ಮ 'ಲಿವಿಂಗ್ ಇನ್ ದ ಎಂಡ್ ಟೈಮ್ಸ್' ಪುಸ್ತಕದಲ್ಲಿ ನೆರೂಡ ದಾಖಲಿಸಿರುವ ತಮಿಳಿನ ಅಂತ್ಯಜ ಕುಲದ ಹೆಂಗಸಿನ ಕುರಿತು ಬರೆದಿರುವ ಭಾಗದ ಬಗ್ಗೆ ಪ್ರಸ್ತಾಪಿಸುತ್ತ, ಹೀಗೆ ಬರೆಯುತ್ತಾರೆ: "ಈ ಭಾಗವು ಗಮನಾರ್ಹವಾಗಿದೆ – ಸ್ಪಷ್ಟ ಕಾರಣಗಳಿಗಾಗಿ ಮಾತ್ರವಲ್ಲ: ಅತ್ಯಾಚಾರದ ನಾಚಿಕೆಯಿಲ್ಲದ ಕಥೆಯೊಂದನ್ನು ಕೊಳಕು ವಿವರಗಳೊಂದಿಗೆ ಜಾಗರೂಕತೆಯಿಂದ ಯಾರ ಗಮನವನ್ನೂ ಸೆಳೆಯದ ಹಾಗೆ ಕಡೆಗಣಿಸಲಾಗಿದೆ ("ಸುಮ್ಮನೆ ಬಂದಳು. ಬತ್ತಲಾದಳು" – ಅವಳು




ಹೇಗೆ ಬೆತ್ತಲೆಯಾದಳು? ಸ್ಪಷ್ಟವಾಗಿಯೇ, ಅವಳು ಅದನ್ನು ಸ್ವತಃ ಮಾಡಲಿಲ್ಲ), ಬಲಿಪಶುವಿನ ಜಡತೆಯನ್ನು ದೈವಿಕ ಅನಾದರವಾಗಿಸುವ ನಿಗೂಢತೆ, ನಿರೂಪಕನ ಮೂಲಭೂತ ಸಭ್ಯತೆ ಮತ್ತು ನಾಚಿಕೆಗೇಡಿನ ಕೊರತೆ (ಅವರು ಹುಡುಗಿಯತ್ತ ಆಕರ್ಷಿತರಾಗಿದ್ದರೆ, ಅವಳು ಪ್ರತಿದಿನ ಬೆಳಗ್ಗೆ ತನ್ನ ಮಲವನ್ನು ಮೂಸುತ್ತ, ನೋಡುತ್ತ, ಅದರೊಂದಿಗೆ ವ್ಯವಹರಿಸುತ್ತಿದ್ದಾಳೆ ಎಂಬುದರ ಅರಿವಿನಿಂದ ಅವರು ಮುಜುಗರಕ್ಕೊಳಗಾಗಲಿಲ್ಲವೇ?). ಇದರ ಅತ್ಯಂತ ಗಮನಾರ್ಹ ಲಕ್ಷಣವೆಂದರೆ ಮಲದ ದೈವೀಕರಣ: ಮಲವಿಸರ್ಜನೆಯನ್ನು ಅಡಗಿಸಿರುವ ಸ್ಥಳದಲ್ಲಿಯೇ ಒಬ್ಬ ಭವ್ಯ ದೇವತೆ ಕಾಣಿಸಿಕೊಳ್ಳುತ್ತಾಳೆ. ಈ ಸಮೀಕರಣವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು: ವಿದೇಶಿ ಅನ್ಯರನ್ನು ಅನಾದರದ ದೈವತ್ವಕ್ಕೆ ಏರಿಸುವುದು ಕಟ್ಟುನಿಟ್ಟಾಗಿ ಅದನ್ನು ಮಲದಂತೆ ಪರಿಗಣಿಸುವುದಕ್ಕೆ ಸಮಾನವಾಗಿರುತ್ತದೆ."

ನೆರೂಡ ನಡವಳಿಕೆಯನ್ನು ಜಿಜೆಕ್ ಇಲ್ಲಿ ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ನೋಡಿದ್ದಾರೆ. ಆದರೆ, ಭಾರತೀಯ ಸಂದರ್ಭದಲ್ಲಿ ಇದನ್ನು ಜಾತಿವಿಶ್ಲೇಷಣಾತ್ಮಕ ನೆಲೆಯಲ್ಲಿ ನೋಡಬಹುದು. ನೆರೂಡ ನಿರೂಪಣೆಯಲ್ಲಿ ಸ್ಪಷ್ಟವಾಗಿ ಕಾಣಿಸುವುದು